# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1626**
**ಸದಸ್ಯರ ಹೆಸರು** : ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 18.03.2021
**ಉತ್ತರಿಸುವ ಸಚಿವರು** : ಮುಖ್ಯಮಂತ್ರಿಗಳು

*****

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆ.ಪಿ.ಟಿ.ಸಿ.ಎಲ್) ಮಂಡಳಿಯು 2019 ರಲ್ಲಿ ಖಾಲಿಯಿದ್ದ AED, AE, JE, JPA, JA ಸೇರಿದಂತೆ ಒಟ್ಟು 3646 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ 2 ವರ್ಷಗಳೇ ಕಳೆದರೂ ನೇಮಕಾತಿ ಪ್ರಕ್ರಿಯೆ ನಡೆಸದಿರಲು ಕಾರಣವೇನು: | 1. i. ಏಪ್ರಿಲ್-2019 ಮತ್ತು ಮೇ-2019 ರ ಅವಧಿಯಲ್ಲಿ ಲೋಕಸಭಾ ಚುನಾವಣೆ ನಡೆದ ಕಾರಣ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಲಿಲ್ಲ. ಅಲ್ಲದೇ, ದಿನಾಂಕ: 12.11.2019 ರಂದು ನಡೆದ 118 ನೇ ಮಂಡಳಿ ಸಭೆಯಲ್ಲಿ ಕವಿಮಂ ನೌಕರಿ ಭರ್ತಿ ಮತ್ತು ಬಡ್ತಿ ನಿಯಮಾವಳಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಯ ನೇರ ನೇಮಕಾತಿ ಮತ್ತು ಬಡ್ತಿ ಕೋಟಾವನ್ನು ಕ್ರಮವಾಗಿ ಶೇ.10 ಮತ್ತು ಶೇ.90 ಕ್ಕೆ ನಿಗದಿಪಡಿಸಿ ತಿದ್ದುಪಡಿ ಮಾಡಲಾಯಿತು. ಇದರಿಂದ ಖಾಲಿ ಹುದ್ದೆಗಳು ಇಲ್ಲದ ಹಿನ್ನಲೆಯಲ್ಲಿ/ಅತ್ಯಂತ ಕಡಿಮೆಯಾದ ಹಿನ್ನಲೆಯಲ್ಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುದ್ದೆಗೆ ಕರೆಯಲಾಗಿದ್ದ ಉದ್ಯೋಗ ಪ್ರಕಟಣೆಯನ್ನು ಮಾತ್ರ ದಿನಾಂಕ: 06.01.2020 ರಂದು ಹಿಂಪಡೆಯಲಾಗಿರುತ್ತದೆ.<br>ii. ದಿನಾಂಕ: 25.02.2019 ರ ಉದ್ಯೋಗ ಪ್ರಕಟಣೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಯ ನೇಮಕಾತಿ ವಿರುದ್ಧ ಶ್ರೀಮತಿ ಮಂಜುಳ ಮತ್ತು ಇತರರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಿನಾಂಕ: 06.03.2019 ರಂದು ರಿಟ್ ಅರ್ಜಿ ಸಂಖ್ಯೆ: 10742-10864/2019 ನ್ನು ಸಲ್ಲಿಸಿದ್ದರು. ಮಾನ್ಯ ನ್ಯಾಯಾಲಯವು ದಿನಾಂಕ: 02.07.2019 ರ ಮಧ್ಯಂತರ ತೀರ್ಪಿನಲ್ಲಿ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆಯನ್ನು ರಿಟ್ ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟು ಮುಂದುವರೆಸುವಂತೆ ಆದೇಶಿಸಿರುತ್ತದೆ.<br>iii. ಮಾನ್ಯ ಉಚ್ಛ ನ್ಯಾಯಾಲಯವು, ದಿನಾಂಕ: 20.01.2020 ರಲ್ಲಿ ರಿಟ್ ಅರ್ಜಿಯನ್ನು ವಜಾಗೊಳಿಸಿರುತ್ತದೆ.<br>2. ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಉಂಟಾಗಿದ್ದ ನೆರೆ ಹಾವಳಿಯಿಂದಾಗಿ ಕವಿಪ್ರನಿನಿ ಮತ್ತು ಎಸ್ಕಾಂಗಳ ಸಿಬ್ಬಂದಿಗಳು ನಿರಂತರ ವಿದ್ಯುತ್ ಸರಬರಾಜು ಪೂರೈಕೆ ಕಾರ್ಯದಲ್ಲಿ ನಿರತರಾಗಿದ್ದರಿಂದ ಹಾಗೂ ಮಾರ್ಚ್-2020 ರಿಂದ ಕೊರೊನಾ ವೈರಸ್ ಹರಡುವಿಕೆಯಿಂದ, ವಾಣಿಜ್ಯ/ಕೈಗಾರಿಕಾ ಸ್ಥಾವರಗಳ ವಿದ್ಯುತ್ ಬೇಡಿಕೆ ಕಡಿಮೆಯಾಗಿದ್ದುದರಿಂದ, ಕಂದಾಯ ವಸೂಲಾತಿಯಲ್ಲಿ ಗಣನೀಯ ಇಳಿಕೆಯಾಗಿ ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಿರುತ್ತದೆ. ಸದರಿ ಪರಿಸ್ಥಿತಿಯನ್ನು ನಿಭಾಯಿಸಿ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಅಗತ್ಯವಾಗಿದ್ದುದರಿಂದ, ಅಲ್ಲದೆ, ಈ ಹುದ್ದೆಗಳಿಗೆ ಆಪ್ಟಿಟ್ಯೂಡ್ ಪರೀಕ್ಷಾ ಪ್ರಕ್ರಿಯೆಯು ಪ್ರಾರಂಭಗೊಳ್ಳದೆ ಇದ್ದುದರಿಂದ ಮತ್ತು ನಿಗಮ/ ಎಸ್ಕಾಂಗಳ ವೆಚ್ಚದ ಬಾಬ್ತಿನಲ್ಲಿ ಮಿತವ್ಯಯ ಪಾಲಿಸುವ ಅವಶ್ಯಕತೆ |

...2

<table>
<tr><td></td><td></td><td>ಇದ್ದುದರಿಂದ, ಒಟ್ಟು 1559 ಹುದ್ದೆಗಳನ್ನು ಭರ್ತಿ ಮಾಡುವುದನ್ನು ಆಡಳಿತಾತ್ಮಕ ಕಾರಣಗಳಿಂದಾಗಿ 'ರದ್ದುಗೊಳಿಸುವ ಅಂಶವನ್ನು' ದಿನಾಂಕ: 09.09.2020 ರಂದು ನಡೆದ ನಿಗಮದ ನಿರ್ದೇಶಕರುಗಳ 121ನೇ ಮಂಡಳಿ ಸಭೆಯ ಗಮನಕ್ಕೆ ತಂದು, ದಿನಾಂಕ: 21.11.2020 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.</td></tr>
<tr><td>ಆ)</td><td>ಪ್ರಸ್ತುತ, ಈ ನೇಮಕಾತಿಯ ಹಂತದ ಬಗ್ಗೆ ಅಭ್ಯರ್ಥಿಗಳಿಗೆ ಮಾಹಿತಿಯನ್ನು ನೀಡಲಾಗಿದೆಯೇ: ನೀಡಿದ್ದಲ್ಲಿ, ಯಾವಾಗ ಮಾಹಿತಿ ನೀಡಲಾಗಿದೆ:</td><td>ನೇಮಕಾತಿ ರದ್ದುಗೊಂಡಿರುವ ಬಗ್ಗೆ ದಿನಪತ್ರಿಕೆಗಳಲ್ಲಿ ಮಾಹಿತಿ ನೀಡಲಾಗಿರುತ್ತದೆ ಹಾಗೂ ಕವಿಪ್ರನಿನಿ ಮತ್ತು ಎಸ್ಕಾಂಗಳ ವೆಬ್‌ಸೈಟ್‌ಗಳಲ್ಲಿ ಅಧಿಸೂಚನೆಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ.</td></tr>
<tr><td>ಇ)</td><td>ಈ ಹುದ್ದೆಗಳಿಗೆ ರಾಜ್ಯದಲ್ಲಿ ಒಟ್ಟು ಎಷ್ಟು ಜನ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿದ್ದಾರೆ: (ವಿವರ ನೀಡುವುದು)</td><td>ಈ ನೇಮಕಾತಿಗೆ ಸಂಬಂಧಿಸಿದಂತೆ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ಹುದ್ದೆಯ ಹೆಸರು</th><th>ಒಟ್ಟು ಅರ್ಜಿಗಳ ಸಂಖ್ಯೆ</th></tr>
<tr><td>1</td><td>ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)</td><td>12040</td></tr>
<tr><td>2</td><td>ಸಹಾಯಕ ಇಂಜಿನಿಯರ್(ವಿ)</td><td>21988</td></tr>
<tr><td>3</td><td>ಸಹಾಯಕ ಇಂಜಿನಿಯರ್(ಸಿ)</td><td>14128</td></tr>
<tr><td>4</td><td>ಕಿರಿಯ ಇಂಜಿನಿಯರ್(ವಿ)</td><td>20840</td></tr>
<tr><td>5.</td><td>ಕಿರಿಯ ಇಂಜಿನಿಯರ್(ಸಿ)</td><td>8213</td></tr>
<tr><td>6.</td><td>ಕಿರಿಯ ಆಪ್ತ ಸಹಾಯಕ</td><td>316</td></tr>
<tr><td>7</td><td>ಕಿರಿಯ ಸಹಾಯಕ</td><td>131370</td></tr>
<tr><td colspan="2">ಒಟ್ಟು</td><td>208895</td></tr>
</table></td></tr>
<tr><td>ಈ)</td><td>ಈ ಅರ್ಜಿ ಸಲ್ಲಿಕೆಗಳಿಂದ ಕೆ.ಪಿ.ಟಿ.ಸಿ.ಎಲ್ ಗೆ ಸಂಗ್ರಹವಾದ ಒಟ್ಟು ಅರ್ಜಿಯ ಶುಲ್ಕದ ಮೊತ್ತವೆಷ್ಟು: (ಸಂಪೂರ್ಣ ಮಾಹಿತಿ ನೀಡುವುದು)</td><td>ಈ ಹುದ್ದೆಗಳಿಗೆ ಅರ್ಜಿ ಸಲ್ಲಿಕೆಯಿಂದ ಕೆಪಿಟಿಸಿಎಲ್ ಗೆ ಸಂಗ್ರಹವಾಗಿರುವ ಒಟ್ಟು ಅರ್ಜಿಯ ಶುಲ್ಕದ ಮೊತ್ತ ರೂ.9.18 ಕೋಟಿಗಳಷ್ಟಾಗಿರುತ್ತದೆ.</td></tr>
<tr><td>ಉ)</td><td>ಒಂದು ವೇಳೆ ಅಧಿಸೂಚನೆ ರದ್ದಾಗಿದ್ದರೆ, ಅರ್ಜಿ ಸಲ್ಲಿಸಿದ (ಶುಲ್ಕ ಭರಿಸಿದ) ಅರ್ಜಿದಾರರಿಗೆ ಶುಲ್ಕ ಹಿಂದಿರುಗಿಸಲಾಗಿದೆಯೇ?</td><td>ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ:ಕವಿಪ್ರನಿನಿ/ಬಿ16/ 86393/ 2018-19 (ಎನ್.ಹೆಚ್.ಕೆ./ಹೆಚ್.ಕೆ) ದಿನಾಂಕ: 25.02.2019 ಹಾಗೂ ಉದ್ಯೋಗ ಪ್ರಕಟಣೆ ಸಂಖ್ಯೆ:ಕವಿಪ್ರನಿನಿ/ಬಿ16/86393 (ಹೆಚ್.ಕೆ.)/2018-19 ದಿನಾಂಕ: 04.01.2020 ರ ಕಂಡಿಕೆ 5 ರಲ್ಲಿ "Application Fee (Non-Refundable)" ಹಾಗೂ ಕ್ರಮವಾಗಿ ಕಂಡಿಕೆ-(11/9) ರ ಸಾಮಾನ್ಯ ಸೂಚನೆಯ ಉಪ ಕ್ರಮಾಂಕ-(xv/xvi/xvii) ರಲ್ಲಿ "The application fee paid will not be refunded or adjusted towards any future recruitment under any circumstances"ಎಂದು ತಿಳಿಸಲಾಗಿರುತ್ತದೆ. ಆದ್ದರಿಂದ ಅರ್ಜಿ ಶುಲ್ಕವನ್ನು ಹಿಂದಿರುಗಿಸಲು ಅವಕಾಶವಿರುವುದಿಲ್ಲ.</td></tr>
</table>

ಸಂಖ್ಯೆ: ಎನರ್ಜಿ 82 ಇಬಿಎಸ್ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ